ಎರಡನೇ ಭಾರತ-UK 2+2 ವಿದೇಶಾಂಗ ಮತ್ತು ರಕ್ಷಣಾ ವಿಷಯದ ಸಂವಾದ

ಡಿಸೆಂಬರ್ 03, 2024

ಎರಡನೇ ಭಾರತ-UK 2+2 ವಿದೇಶಾಂಗ ಮತ್ತು ರಕ್ಷಣೆ ಕುರಿತ ಸಂವಾದವನ್ನು 3 ಡಿಸೆಂಬರ್ 2024 ರಂದು ನವದೆಹಲಿಯಲ್ಲಿ ಆಯೋಜಿಸಲಾಯಿತು. ಭಾರತೀಯ ನಿಯೋಗವನ್ನು ವಿದೇಶಾಂಗ ಸಚಿವಾಲಯ, ಪಶ್ಚಿಮ ಯುರೋಪಿನ ಜಂಟಿ ಕಾರ್ಯದರ್ಶಿ ಶ್ರೀ ಪಿಯೂಷ್ ಶ್ರೀವಾಸ್ತವ ಮತ್ತು ರಕ್ಷಣಾ ಸಚಿವಾಲಯ, ಅಂತಾರಾಷ್ಟ್ರೀಯ ಸಹಕಾರದ ಜಂಟಿ ಕಾರ್ಯದರ್ಶಿ ಶ್ರೀ ವಿಶ್ವೇಶ್ ನೇಗಿ ಮುನ್ನಡೆಸಿದರು. UK ನಿಯೋಗದ ನೇತೃತ್ವವನ್ನು ಭಾರತದ ನಿರ್ದೇಶಕರು, ಹಿಂದೂ ಮಹಾಸಾಗರ ನಿರ್ದೇಶನಾಲಯ, ವಿದೇಶಿ, ಕಾಮನ್‌ವೆಲ್ತ್ ಮತ್ತು ಅಭಿವೃದ್ಧಿ ಕಚೇರಿಯ ಭಾರತೀಯ ನಿರ್ದೇಶಕರಾದ ಶ್ರೀ. ಬೆನ್ ಮೆಲ್ಲೋರ್ ಮತ್ತು ರಕ್ಷಣಾ ಸಚಿವಾಲಯದ ಕಾರ್ಯತಂತ್ರದ ಕಾರ್ಯಕ್ರಮಗಳ ನಿರ್ದೇಶಕ ಶ್ರೀ ಶಿಮೊನ್ ಫಿಮಾ ಮುನ್ನಡೆಸಿದರು.

2. ಎರಡೂ ಕಡೆಯಿಂದ ಭಾರತ-UK ಸಮಗ್ರ ಕಾರ್ಯತಂತ್ರದ ಸಹಭಾಗಿತ್ವದ ಸಂಪೂರ್ಣ ಹರವಿನ ಕುರಿತು ಚರ್ಚಿಸಲಾಯಿತು ಮತ್ತು ಉಭಯ ದೇಶಗಳ ನಡುವಿನ ಕ್ರಿಯಾತ್ಮಕ ಪಾಲುದಾರಿಕೆಯನ್ನು ಮುನ್ನಡೆಸಲು ನಿರಂತರ ಉನ್ನತ ಮಟ್ಟದ ತೊಡಗಿಸಿಕೊಳ್ಳುವಿಕೆಯ ಮಹತ್ವವನ್ನು ಒತ್ತಿ ಹೇಳಲಾಯಿತು. ಭಾರತ-UK ರೋಡ್‌ಮ್ಯಾಪ್ 2030 ಅಡಿಯಲ್ಲಿ ನಿಯೋಗಗಳು ಪ್ರಗತಿಯನ್ನು ಪರಿಶೀಲಿಸಿದವು ಮತ್ತು ಸಹಯೋಗದ ಹೊಸ ಕೇಂದ್ರೀಕೃತ ಕ್ಷೇತ್ರಗಳನ್ನು ಗುರುತಿಸುವ ಮೂಲಕ ಮತ್ತು ಪರಿಷ್ಕೃತ ರೋಡ್‌ಮ್ಯಾಪ್ ಮೇಲೆ ಕೆಲಸ ಮಾಡುವ ಮೂಲಕ ಪಾಲುದಾರಿಕೆಯನ್ನು ಪುನರುಜ್ಜೀವನಗೊಳಿಸುವ ಅಗತ್ಯತೆಯನ್ನು ಒಪ್ಪಿಕೊಳ್ಳಲಾಯಿತು. ಪರಸ್ಪರ ಲಾಭದಾಯಕ FTA ಯ ಆರಂಭಿಕ ತೀರ್ಮಾನದ ಮೇಲೆ ಕೇಂದ್ರೀಕರಿಸಿ ಆರ್ಥಿಕ ಮತ್ತು ವ್ಯಾಪಾರ ಸಂಬಂಧಗಳನ್ನು ಬಲಪಡಿಸುವುದು, ಸೈಬರ್ ಮತ್ತು ಭಯೋತ್ಪಾದನೆ ನಿಗ್ರಹ ಕ್ಷೇತ್ರಗಳನ್ನು ಒಳಗೊಂಡಂತೆ ರಕ್ಷಣಾ ಮತ್ತು ಭದ್ರತಾ ಸಂಬಂಧಗಳನ್ನು ಬಲಪಡಿಸುವುದು, ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ನಾವೀನ್ಯತೆಯನ್ನು ಬೆಳೆಸುವುದು, ಶುದ್ಧ ಮತ್ತು ಹಸಿರು ಇಂಧನದಲ್ಲಿ ಸಹಕಾರವನ್ನು ಗಾಢಗೊಳಿಸುವುದು, ತಂತ್ರಜ್ಞಾನ, ಆರೋಗ್ಯ ಮತ್ತು ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಜನರಿಂದ ಜನರ ನಡುವಿನ ಸಂಬಂಧಗಳ ಸ್ಥಾಪನೆ ಸೇರಿದಂತೆ ಪ್ರಮುಖ ಆದ್ಯತೆಗಳನ್ನು ಚರ್ಚೆಗಳು ಒಳಗೊಂಡಿತು.

3. ತಂತ್ರಜ್ಞಾನ ಮತ್ತು ಭದ್ರತಾ ತೊಡಗುವಿಕೆ, UK-ಇಂಡಿಯಾ ಮೂಲಸೌಕರ್ಯ ಹಣಕಾಸು ಸೇತುವೆ, ವಿದ್ಯುತ್ ಪ್ರಾಯೋಗಿಕ ಸಾಮರ್ಥ್ಯ ಪಾಲುದಾರಿಕೆ ಮತ್ತು ರಕ್ಷಣಾ ಕೈಗಾರಿಕಾ ರೋಡ್‌ಮ್ಯಾಪ್‌ನಲ್ಲಿ ಪ್ರಗತಿ ಮುಂತಾದ ಹೊಸ ಪ್ರಮುಖ ತೊಡಗುವಿಕೆಗಳ ಪ್ರಾರಂಭ ಸೇರಿದಂತೆ ವಿವಿಧ ವಲಯಗಳ ಪ್ರಗತಿಯನ್ನು ಎರಡೂ ಕಡೆಯಿಂದಲೂ ಪ್ರಶಂಸಿಸಲಾಯಿತು.

4. ಈ ಸಂವಾದವು ಇತ್ತೀಚಿನ ಜಾಗತಿಕ ಮತ್ತು ಪ್ರಾದೇಶಿಕ ಅಭಿವೃದ್ಧಿಗಳ ಕುರಿತು ದೃಷ್ಟಿಕೋನಗಳನ್ನು ವಿನಿಮಯ ಮಾಡಲು ಅವಕಾಶವನ್ನು ಒದಗಿಸಿತು. ಮುಕ್ತ, ತೆರೆದ ಮತ್ತು ಒಳಗೊಳ್ಳುವ ಇಂಡೋ-ಪೆಸಿಫಿಕ್ ಸೃಷ್ಟಿಗೆ ಎರಡೂ ದೇಶಗಳು ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯ ಕುರಿತಾದ ತಮ್ಮ ಹಂಚಿಕೊಂಡ ದೃಷ್ಟಿಕೋನವನ್ನು ಪುನರುಚ್ಚರಿಸಿದರು.

5. ಸಂವಾದದ ಮೂರನೇ ಆವೃತ್ತಿಯನ್ನು 2025 ರಲ್ಲಿ ಪರಸ್ಪರ ಅನುಕೂಲಕರ ದಿನಾಂಕದಂದು UK ಯಲ್ಲಿ ನಡೆಸಲಾಗುವುದು ಎಂಬ ನಿರ್ಧಾರವನ್ನು ಸಮ್ಮತಿಸಲಾಯಿತು.

ನವದೆಹಲಿ

ಡಿಸೆಂಬರ್ 03, 2024